ಫೆಬ್ರವರಿ-2022

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ

## "Press Conference"

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ **ಕೆ.ಎಸ್.ಈಶ್ವರಪ್ಪ,** ಇಲಾಖೆಯ ಸಾಧನೆಗಳ ಕುರಿತು ದಿನಾಂಕ:11.02.2022ರಂದು ಪತ್ರಿಕಾಗೋಷ್ಠಿ ನಡೆಸಿ ಮಾಧ್ಯಮ ಮಿತ್ರರಿಗೆ ಇಲಾಖೆಯ ಯೋಜನೆಗಳು ಮತ್ತು ಸಾಧನೆ ಕುರಿತು ಮಾಹಿತಿ ನೀಡಿದ್ರು. ಈ ವೇಳೆ ಮಾತನಾಡಿದ ಅವರು **"ಮನೆ ಮನೆಗೆ ಗಂಗೆ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಕನಸಿನ ಯೋಜನೆಯಾಗಿದೆ. ರಾಜ್ಯದಲ್ಲಿ ಈ ಯೋಜನೆಯನ್ನು ಅತೀ ವೇಗವಾಗಿ ಅನುಷ್ಠಾನ ಮಾಡಲಾಗುತ್ತಿದೆ. 2024 ರೊಳಗೆ ಸಂಪೂರ್ಣ ಗ್ರಾಮೀಣ ಕರ್ನಾಟಕದ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ ಜೊತೆಗೆ ಸಮರ್ಪಕ ನೀರು ಒದಗಿಸುವ ಗುರಿ ಹೊಂದಲಾಗಿದೆ ಎಂದ್ರು. ಮಾತು ಮುಂದುವರೆಸಿ, ನರೇಗಾ ಯೋಜನೆಯಡಿಯಲ್ಲಿ ಇಲಾಖೆಯ ಸಾಧನೆ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಸಾಧನೆ ಹಾಗೂ ಜಲಶಕ್ತಿ ಅಭಿಯಾನಗಳ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದ್ರು."**




## ತರಬೇತಿ ಕಾರ್ಯಕ್ರಮಗಳು

### "ಜಲ ಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲನಾ ಸಭೆ"



ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ **ಜಲ ಜೀವನ್ ಮಿಷನ್** ಯೋಜನೆಯನ್ನು ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಅನುಷ್ಠಾನ ಮಾಡುತ್ತಿದ್ದು, ಯೋಜನೆಯ ಪ್ರಗತಿ ಸಂಬಂಧ ದಿನಾಂಕ:03.02.2022 ರಂದು ಎಲ್ಲಾ ಜಿಲ್ಲೆಗಳ ಕಾರ್ಯನಿರ್ವಾಹಕ ಅಭಿಯಂತರರ ನೇತೃತ್ವದ ತಂಡ ಹಾಗೂ ಲೆಕ್ಕ ಶಾಖೆಯ ಅಧೀಕ್ಷಕರು ಮತ್ತು ಕೇಂದ್ರ ಕಚೇರಿಯ ತಾಂತ್ರಿಕ ಶಾಖೆಯ ಎಲ್ಲಾ ಅಭಿಯಂತರರು ಮತ್ತು ಸಪೋರ್ಟ್ ಎಂಜಿನಿಯರ್‌ಗಳು ಹಾಗೂ ಲೆಕ್ಕ ಶಾಖೆಯ ಅಧಿಕಾರಿಗಳು ಮತ್ತು ಐ.ಎಸ್.ಎ ಶಾಖೆ ಹಾಗೂ ಡಬ್ಲ್ಯೂ.ಕ್ಯು.ಎಂ.ಎಸ್ ಶಾಖೆಗಳ ಅಧಿಕಾರಿ/ಸಿಬ್ಬಂದಿ ಎಲ್ಲಾ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಿದ್ದರು. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಎಲ್ಲಾ ಜಿಲ್ಲೆಗಳ ಪ್ರಗತಿಯನ್ನು ಪರಿಶೀಲಿಸಿದರು.




### "ಜಲ ಜೀವನ್ ಮಿಷನ್ ಯೋಜನೆಯಲ್ಲಿ ಭಾಗಿಯಾಗುವ ತಾಂತ್ರಿಕ ಸಿಬ್ಬಂದಿಗೆ ತರಬೇತಿ"

ದಿನಾಂಕ 04-02-2022 ರಂದು ಇಲಾಖೆಯು ಅನುಷ್ಠಾನಗೊಳಿಸುತ್ತಿರುವ **ಜಲ ಜೀವನ್ ಮಿಷನ್** ಯೋಜನೆಯ ಬಗ್ಗೆ ಮಾಹಿತಿ ಮತ್ತು ಇಲಾಖೆಯ ತಾಂತ್ರಿಕ ಸಿಬ್ಬಂದಿಗೆ ತರಬೇತಿ ಕೊಡುವ ವಿಧಾನವನ್ನು ಆಯ್ದ ಸಂಪನ್ಮೂಲ ವ್ಯಕ್ತಿಗಳಿಗೆ ತಿಳಿಸಿಕೊಡಲಾಯಿತು. ಈ ಸಂದರ್ಭಲ್ಲಿ ಆಯುಕ್ತರಾದ ಡಾ.ಹೆಚ್.ಎಸ್.ಪ್ರಕಾಶ್ ಕುಮಾರ್ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಿದರು. ಈ ಸಂಪನ್ಮೂಲ ವ್ಯಕ್ತಿಗಳು ವಿವಿಧ ಜಿಲ್ಲೆಗಳಿಗೆ ಹೋಗಿ ಅಲ್ಲಿನ **ಜಲ ಜೀವನ್ ಮಿಷನ್** ಯೋಜನೆಯ ತಾಂತ್ರಿಕ ಸಿಬ್ಬಂದಿಗೆ ಎರಡು ದಿನಗಳ ತರಬೇತಿಯನ್ನು ನೀಡುತ್ತಿದ್ದಾರೆ.







### "ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆ ಪ್ರಗತಿ ಪರಿಶೀಲನಾ ಸಭೆ"



**ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ವಿವಿಧ ಘಟಕಾಂಶಗಳ ಪ್ರಗತಿ ಮತ್ತು ರಾಜ್ಯವನ್ನು **ODF+** ಮಾಡುವ ನಿಟ್ಟಿನಲ್ಲಿ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಮತ್ತು ಜಿಲ್ಲೆಗಳು ಕಡ್ಡಾಯವಾಗಿ ಮಾಡಲೇಬೇಕಾಗಿರುವ ಕೆಲಸಗಳ ಬಗ್ಗೆ ಎಲ್ಲಾ ಜಿಲ್ಲೆಗಳ **ಎಸ್.ಬಿ.ಎಂ(ಜಿ)** ನೋಡಲ್ ಅಧಿಕಾರಿಗಳು ಮತ್ತು ಆಯ್ದ ಸಮಾಲೋಚಕರುಗಳಿಗೆ 14 ಮತ್ತು 15ನೇ ಫೆಬ್ರವರಿ 2022 ಗಳಂದು ಎರಡು ದಿನಗಳ ಕಾಲ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರ ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಾಗಾರದಲ್ಲಿ ಉಪ ಕಾರ್ಯದರ್ಶಿ(ಅಭಿವೃದ್ಧಿ) ಸೇರಿದಂತೆ ಕೇಂದ್ರ ಕಚೇರಿಯ ವಿಷಯ ತಜ್ಞರುಗಳು ಶಿಬಿರಾರ್ಥಿಗಳಿಗೆ ತರಬೇತಿ ನೀಡಿದರು.





### "WASH ಸಮಾವೇಶ"

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸುಧಾರಿತ ನೀರು, ನೈರ್ಮಲ್ಯ ಮತ್ತು ಶುಚಿತ್ವದ ಅಭ್ಯಾಸಗಳ ಕುರಿತು ದಿನಾಂಕ:23.02.2022 ರಿಂದ ದಿನಾಂಕ:25.02.2022 ರವರೆಗೆ **NIRDRP,** ಜಲಶಕ್ತಿ ಮಂತ್ರಾಲಯ, ಪಂಚಾಯತ್ ರಾಜ್ ಸಚಿವಾಲಯ, **UNICEF** ಮತ್ತು ಇತರೆ **Line Department**ಗಳ ಸಹಯೋಗದೊಂದಿಗೆ **Video Conference** ಮೂಲಕ **ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH)** ಸಮಾವೇಶವನ್ನು ನಡೆಸಲಾಯಿತು.




